ಪಿ. ರಾಮಯ್ಯ ನೇತೃತ್ವದ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವುದು.

2191(2790) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಿ. ರಾಮಯ್ಯ ನೇತೃತ್ವದ ಸಮಿತಿ ತನ್ನ ವರದಿ ಸಲ್ಲಿಸಿದೆಯೇ?

ಆ) ಹಾಗಿದ್ದಲ್ಲಿ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸಲಾಗಿದೆಯೇ?

ಇ) ಅನುಷ್ಠಾನಗೊಳಿಸದಿದ್ದಲ್ಲಿ, ಯಾವಾಗ ವರದಿಯನ್ನು ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ರಾಜ್ಯ ಸಚಿವರು) :—

ಅ) ಹೌದು

ಆ) ಸದ್ಯಕ್ಕೆ ಸಮಿತಿಯ ವರದಿಯನ್ನು ಭಾಗಶಃ ಅನುಷ್ಠಾನಗೊಳಿಸಲಾಗಿದೆ.

ಇ) ಉಳಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆದಷ್ಟು ಬೇಗನೇ ಕ್ರಮ ತೆಗದುಕೊಳ್ಳಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ವಕ್ಫ್ಸ್ ಬೋರ್ಡಿನಿಂದ ನೀಡಿರುವ ಅನುದಾನ.

2192(2791) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ಮಂಡ್ಯ ಜಿಲ್ಲೆಯಲ್ಲಿ ವಕ್ಫ್ಸ್ ಬೋರ್ಡಿನಿಂದ ಅನುದಾನ ನೀಡಲಾಗಿದೆಯೇ?

2. ಹಾಗಿದ್ದಲ್ಲಿ ಅದರ ವಿವರಗಳೇನು? (ತಾಲ್ಲೂಕುವಾರು ನೀಡುವುದು)

ಶ್ರೀ ಎ.ಎಮ್. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ಸ್ ಸಚಿವರು) :—

1. ಹೌದು, ಮಂಡ್ಯ ಜಿಲ್ಲೆಯ 32 ವಕ್ಫ್ಸ್ ಸಂಸ್ಥೆಗಳಿಗೆ 2000-01ನೇ ಸಾಲಿನಲ್ಲಿ ರೂ. 10,45,000-00 ಗಳನ್ನು ಮಂಜೂರು ಮಾಡಲಾಗಿದೆ.

ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

	ತಾಲ್ಲೂಕು	ವಕ್ಫ್ ಸಂಸ್ಥೆಗಳ ಸಂಖ್ಯೆ	ಮೊತ್ತ ರೂ.
1.	ಮದ್ದೂರು	05	2,10,000-00
2.	ಪಾಂಡವಪುರ	01	25,000-00
3.	ಕೆ.ಆರ್. ಪೇಟೆ	06	1,50,000-00
4.	ಮಳವಳ್ಳಿ	02	40,000-00
5.	ಶ್ರೀರಂಗಪಟ್ಟಣ	04	90,000-00
6.	ಮಂಡ್ಯ	14	5,30,000-00

ಬೆಂಗಳೂರು-ಮೈಸೂರು ಮಧ್ಯೆ ಕಾರಿಡಾರ್ ರಸ್ತೆ ನಿರ್ಮಾಣಕ್ಕೆ ಜಮೀನು ಸ್ವಾಧೀನ.

2193(2792) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು- ಮೈಸೂರು ಮಧ್ಯೆ ಪ್ರಸ್ತಾವಿತ ಕಾರಿಡಾರ್ ರಸ್ತೆ ನಿರ್ಮಿಸಲು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಭೂಸ್ವಾಧೀನ ಪ್ರಕ್ರಿಯೆ ಸಂಪೂರ್ಣಗೊಂಡಿದೆಯೆ?

ಇ) ಜಮೀನು ಕಳೆದುಕೊಳ್ಳುತ್ತಿರುವ ಕೃಷಿಕರಿಗೆ ಪುನರ್ವಸತಿ ಹಾಗೂ ಉದ್ಯೋಗದ ಭರವಸೆಯನ್ನೇನಾದರೂ ನೀಡಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಬೆಂಗಳೂರು-ಮೈಸೂರು ಮಧ್ಯೆ ಪ್ರಸ್ತಾವಿತ ಕಾರಿಡಾರ್ ರಸ್ತೆ ನಿರ್ಮಿಸಲು 20,193 ಎಕರೆ ಜಮೀನನ್ನು ಕೆ.ಐ.ಎ.ಡಿ ಕಾಯ್ದೆ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಇದರಲ್ಲಿ ವೇಗದ ಹೆದ್ದಾರಿ ಮತ್ತು ಅದಕ್ಕೆ ತಕ್ಷಂಬಂಧಿಸಿದ ರಸ್ತೆಗಳ ನಿರ್ಮಾಣಕ್ಕೆ ಒಟ್ಟಾರೆ 6,999 ಎಕರೆ ಜಮೀನು ಬೇಕಾಗುವುದು.

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೆ.ಐ.ಎ.ಡಿ ಕಾಯ್ದೆ ಅನ್ವಯ ಭೂಸ್ವಾಧೀನ ಕೈಗೊಳ್ಳಲು ಪ್ರಾಥಮಿಕ ಅಧಿಸೂಚನೆ ಮಾತ್ರ ಹೊರಡಿಸಲಾಗಿದೆ.